CONQUER
GENERAL
SEXUAL
DEBILITIES
WITH
SHAKTI
SUDHA

Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ನಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 27 ಸಂಚಿಕೆ 292] ಸೋಮವಾರ 14—8—44 [3 ಪೈ

TALK-A-TONE
Monthly Magazine
For Cine News & Views
Advertise
for better Business
Single copy 0-12-0
Enquire— D. Mahaadev
C/o Opera Talkies
Mysore

ಚಲನಚಿತ್ರದಿಂದ ನಾಟಕಕ್ಕೆ

ಸುಪ್ರಸಿದ್ಧ ಚಲನಚಿತ್ರ ನಟ ಶಿಖಾಮಣಿ ಪೃಥ್ವೀರಾಜನು ನಾಟಕ ಕಲೆಯನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಒಂದು ನಾಟಕ ಸಂಘವನ್ನು ತೆರೆದಿರುವನೆಂದು ವರ್ತಮಾನ. ಈ ಕಂಪೆನಿಯ ನಾಟಕಗಳಲ್ಲಿ ಪೃಥ್ವೀರಾಜನೂ ಅವನ ಮಕ್ಕಳೂ ಅಭಿನಯಿಸುತ್ತಾರಂತೆ.

At Ranjit
Running to Crowded houses
ರಣಜಿತ್
ಶಂಕರಪಾರ್ವತಿ
ಸಾಧನ ಬೋಸ್, ಅರೂಣ್
ಪಾತ್ರವಹಿಸಿರುವರು
ಬೆಳಗಿನ ವ್ಯಿದರ್ಶನ—
19 ಮತ್ತು 20 ನೇ ತಾರೀಖು
ಗ ರೀ ಬ್

2 ನೇ ಅಮೋಘ ವಾರ
Opera,
ಅ ಪೆ ರಾ ಟಾ ಕೀ ಸ್
ಫಾ ಪನ್
ಶಿ
ಸರ್ದಾರ್ ಅಖ್ತಾರ್, ಚಂದ್ರಮೋಹನ್
ಸಬಿತಾದೇವಿ, ಬುಡ್ಡು ಅದ್ವಾನಿ
ಕಾಂತಪ್ರಸಾದ್ ಪಾತ್ರವಹಿಸಿರುವರು
ಮುಂದಿನ ವಿನೋದ—
ಭಾ ಗ್ಯ ಲ ಕ್ಷ್ಮಿ
(ತೆಲುಗು)
ಪಾಗಯ್ಯ. ಮಾಲತಿ, ಸೂರ್ಯಕುಮಾರಿ
ಕೃಷ್ಣ, ಮಧುರಂ ಪಾತ್ರವಹಿಸಿರುವರು

ವಿವಿಧ ವರ್ತಮಾನ

ಅಸ್ಸಾಂನಲ್ಲಿ ಉಪ್ಪು ಸೇರಿಗೆ ರೂ. 8, ಸಾಸಿವೆ ಎಣ್ಣೆ ಸೇರಿಗೆ ರೂ. 2 ಬೆಲ್ಲ ಸೇರಿಗೆ ರೂ. 1, ಸಕ್ಕರೆ ಸೇರಿಗೆ ರೂ. 3 ಕ್ರಯವಿದೆಯಂತೆ. ಬಟ್ಟೆ ಎಷ್ಟು ದುಡ್ಡು ಕೊಟ್ಟರೂ ದೊರೆಯದಾಗಿದೆಯಂತೆ.

ರಾಜಗೋಪಾಲಾಚಾರಿಯವರ ಭಾರತ ವಿಭಾಗ ಸೂಚನೆಗೆ, ಸಿಕ್ಕರು ತಮಗೇನೇ ಬೇರೆ ಪ್ರಾಂತ್ಯ ಕೊಡಿ ಎಂದು ಕೂಗಲಾರಂಭಿಸಿರುವರು.

ಹೈದರಾಬಾದಿನ ನಾನಾ ಸ್ತ್ರೀ ಸಮಸ್ಥೆಗಳೂ ಒಟ್ಟಿಗೆ ಸೇರಿ, ಮಕ್ಕಳಿಗೆ ಹಾಲು ಉಚಿತವಾಗಿ ಕೊಡಬೇಕೆಂದು ಠರಾವು ಪುಂಜೂರ್ಮಾಡಿ ಸರಕಾರಕ್ಕೆ ಕಳುಹಿಸಿರುವರು.

ಜೋಗ್ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ಮುಂದಿನ ಜೂಕ್ ತಿಂಗಳಲ್ಲಿ ಮೊದಲನೆ ಭಾಗ ಮುಗಿಸಿ ವಿದ್ಯುಚ್ಛಕ್ತಿಯನ್ನು ಕೊಡಲಾಗುವುದು.

ಭಾರತದಲ್ಲಿ ಆಹಾರ ವ್ಯವಸ್ಥೆ ಚೆನ್ನಾಗಿ ಏರ್ಪಾಡು ಮಾಡಲಾಗಿರುವುದೆಂದು ಅಮೇರಿಕಾದ ಉನ್ನತಾಧಿಕಾರಿಗಳೊಬ್ಬರು ಹೇಳುತ್ತಾರೆ.

ಗಾಂಧೀಜೀ ಈಗ ನಡೆಸುತ್ತಿರುವ ಸಂಧಾನವನ್ನು ನೋಡಿ ಅಮೇರಿಕ ಪತ್ರಿಕೆಗಳು ಹೊಗಳುತ್ತಿವೆ.

ಭಾರತದಲ್ಲಿ ಬಂಧನದಲ್ಲಿರುವ ಖೈದಿಗಳನ್ನೆಲ್ಲಾ ಒಟ್ಟಿಗೆ ಬಿಡುವುದಿಲ್ಲವೆಂದೂ, ಆಗಾಗ್ಗೆ ಒಬ್ಬೊಬ್ಬರನ್ನಾಗಿ ಬಿಡುತ್ತಾರೆಂದೂ ಲಂಡನ್ ವಾರ್ತೆಯೊಂದು ತಿಳಿಸುತ್ತದೆ.

ನಾವಿಕನಿಲ್ಲದ ವಿಮಾನಧಾಳಿಯ ದಿಸೆಯಿಂದ ಮತ್ತೆ ಲಂಡನ್ನಿನಿಂದ 17 ಸಾವಿರ ಮಂದಿ ಮಕ್ಕಳು ಮತ್ತು ತಾಯಂದಿರನ್ನು 22 ಸ್ಪೆಷಲ್ ಟ್ರೇನುಗಳಲ್ಲಿ ರವಾನೆಮಾಡಲಾಗಿದೆ.

ಹಿಟ್ಲರನ್ನು ಕೊಲೆಮಾಡಲು ಯತ್ನಿಸಿದಾಗ ಹಿಮ್ಲರು ಸತ್ತನೆಂದೂ ಗೋರಿಂಗಿಗೆ ಬಲವಾಗಿ ಪೆಟ್ಟುಬಿದ್ದಿತೆಂದೂಯುದ್ಧದಲ್ಲಿ ಕೈಸೆರೆಯಾದ ಜರ್ಮನ್ ಸಿಪಾಯಿಗಳು ಹೇಳುತ್ತಿರುವರು.

ಜಪಾನೀಯರಿಂದ ತಾವು ಗೆದ್ದ ಪ್ರದೇಶವನ್ನು ನೋಡಲು ಲಾರ್ಡ್ ವೇವೆಲ್ಲರು ಪೂರ್ವ ಅಸ್ಸಾಮಿಗೆ ಭೇಟಿ ಕೊಟ್ಟು 'ಇಂಫಾಲ' ಕೊಹಿಮಾ ರಣಕ್ಷೇತ್ರಗಳನ್ನು ಪರೀಕ್ಷಿಸಿದರು.

ಕಲ್ಲೀಕೋಟೆ ಬಳಿ ಅನೇಕರು ಮನೆಯಲ್ಲಿ ಭತ್ತವನ್ನು ಹೆಚ್ಚಾಗಿ ದಾಸ್ತಾನು ಮಾಡಿದ್ದರು. ಪೋಲೀಸರು ಪತ್ತೇ ಹಚ್ಚಿ ಶಮ್ಮ ಸ್ವಾಧೀನಕ್ಕೆ ತೆಗೆದು ಕೊಂಡರು. ಈ ಪೈಕಿ ಎರಡು ಮನೇತಿಯಲ್ಲೂ ಭತ್ತವಿದ್ದಿತು.

ಕಲ್ಕತ್ತಾದಲ್ಲಿ ಟ್ಯಾಕ್ಸಿ ದರವನ್ನು ಹೆಚ್ಚಿಸಿರುತ್ತಾರೆ.

ಬ್ರಿಟನ್ನಿನಲ್ಲಿ ಬ್ಲಾಕ್ ಔಟ್ ತೆಗೆದುಹಾಕುವ ಸಂಭವವುಂಟು.

ಬಂಗಾಳಾದಲ್ಲಿ ಅಕ್ಕೀ ಬೆಲೆ ದಿನದಿನಕ್ಕೆ ಕಮ್ಮಿಯಾಗುತ್ತಿದೆ.

ನಾಜಿ ಸೈನ್ಯಕ್ಕೆ ಅಪಾಯ

30 ನಾಜೀ ಬಾಲ್ಟಿಕ್ ಡಿವಿಜನ್ನುಗಳು ಅಪಾಯ ಸ್ಥಿತಿಯಲ್ಲಿವೆ. ರಷ್ಯನರು ರೀಗಾ ಕಡೆ ವೀರಾವೇಶದಿಂದ ನುಗ್ಗುತ್ತಿರುವರು.

'ಫ್ಲೈಯಿಂಗ್' ಬಾಂಬ್ ಹಾವಳಿ

ಮೊನ್ನೆ ರಾತ್ರಿಯೂ ಜರ್ಮನರು ಇಂಗ್ಲೆಂಡಿನ ಮೇಲೆ 'ಫ್ಲೈಯಿಂಗ್' ಬಾಂಬನ್ನು ಕಳುಹಿಸಿದ್ದರು. ಸಾವು ನೋವು ಸ್ವಲ್ಪವಾಗಿದೆ.

ಮಿತ್ರರ ವಿಜಯ

ಮಿತ್ರರು ಫ್ಲಾರೆನ್ಸನ್ನು ಆಕ್ರಮಿಸಿದರು. ಶತ್ರುಗಳು ಉರಾಜೆಗೆ ಫಲಾಯನರಾದರು.

ಅಮೇರಿಕನ್ನರ ಸಾಹಸ

ಅಮೇರಿಕನ್ನರು ನಾನ್ಟೇಸಿನ ದಕ್ಷಿಣಕ್ಕೆ ಮುನ್ನುಗ್ಗುತ್ತಿದ್ದಾರೆ. ಬ್ರಿಟಿನಿಯಲ್ಲಿನ ಜರ್ಮನ್ ನೌಕಾ ಸಿಲ್ವಾಣಗಳಿಗೆ ಅಪಾಯ ಹೆಚ್ಚುತ್ತಿದೆ.

ನಾಜಿಗಳ ಕ್ರೌರ್ಯ

ಅರೆಜೋಯಿನಲ್ಲಿನ ನೂರಾರು ಜನರನ್ನು ಜರ್ಮನರು ಕೊಂದರು.

ಸಚಿವರು ನಿವೃತ್ತರಾಗುವರು

ಮೈಸೂರು ಸಂಸ್ಥಾನ ರೆವಿನ್ಯೂ ಮತ್ತು ಲಾ ಸಚಿವರಾದ ಶ್ರೀ ಕೆ. ವಿ. ಅನಂತರಾಮುನ್ನರು ಸೆಪ್ಟಂಬರ್ 15 ರಿಂದ ನಿವೃತ್ತರಾಗುವರೆಂದು ತಿಳಿಯುತ್ತದೆ.

ಡೆಲ್ಲಿಯ ಧರ್ಮಪುರದಲ್ಲಿ ಶ್ರೀ ಅಂತಸ್ತಿನ ಘಾರಿ ಕಟ್ಟಡ ಕುಸಿದುಬಿದ್ದಿತು.

ಮದ್ರಾಸಿನ ಒಬ್ಬ ಎಲೆಕ್ಟ್ರಿಕ್ ವ್ಯಾಪಾರಿಯು 8-8-0 ಗೆ ಮಾರಬೇಕಾಗಿದ್ದ ಬಲ್ಬುಗಳನ್ನು ರೂ. 36 ಗೆ ಪೂರಿದ್ದಕ್ಕಾಗಿ ರೂ. 200 ಜುಲ್ಮಾನೆ!

ಲಂಡನ್ನಿನಲ್ಲಿ ಟಾಗೋರು ದಿನಾಚರಣೆಯು ಆಚರಿಸಲ್ಪಟ್ಟಿತು. ಬರ್ನಾರ್ಡ್ ಷಾ ಮುಂತಾದವರು ಲಂಡನ್ನಿನಲ್ಲಿಯ ಟಾಗೋರು ಸೊಸೈಟಿಗೆ ಸಂದೇಶವನ್ನು ಕಳುಹಿಸಿದ್ದರು.

ಮುಖ್ಯವಾದ 3 ವರ್ಷಗಳು

ಸಮರ ಚರಿತ್ರೆಯಲ್ಲಿ ಜೂನ್ 22 ನೆ ತಾರೀಖು ಬಹಳ ಮುಖ್ಯವಾದ ದಿನ. ಯಾಕೆಂದರೆ 3 ವರ್ಷಗಳ ಹಿಂದೆ ಸಮುದ್ರ ಜಗತ್ತಿನ ಏಕೈಕ ನಾಯಕನಾಗಲು ಹಿಟ್ಲರನು ಪ್ರಯತ್ನಿಸಿ ರಷ್ಯಾದ ಮೇಲೆ ಕೈ ಮಾಡಿದನು. ಆದರೆ ಈ ದಿನ ಜಗತ್ತಿನ ಏಕೈಕ ನಾಯಕನಾಗಬೇಕೆಂದು ಯಾವನು ಹಗಲು ಕನಸುಗಳನ್ನು ಕಾಣುತ್ತಾ ಆಕ್ರಮಣದ ಮೇಲೆ ಆಕ್ರಮಣವನ್ನು ಮಾಡುತ್ತಾ ಬಂದನೋ ಅವನು ತಾನು ಹೊರೆಟಿದೆಯಿಂದ ತಳ್ಳಲ್ಪಟ್ಟನು. ಆಕ್ರಮಣದ ಆಸೆಯನ್ನು ಬಿಟ್ಟೆ ಸ್ವರಕ್ಷಣೆ ಮಾಡಿಕೊಳ್ಳುವಂತಾಯಿತು. ಜರ್ಮನಿಯ ಹಗಲು ಕನಸುಗಳನ್ನು ಒಡಿದು ಹಾಕಿದ ರಷ್ಯಾದ ಸಾಹಸ ಪೂರ್ಣವಾದ ಮಹಾ ಇತಿಹಾಸವು ಈ ಮೂರೇ ವರ್ಷಗಳಲ್ಲಿ ನಡೆದಿದೆ (ರಾ. ರ.)

ಂ ಂ

ತಡೆಯಲ್ಪಟ್ಟ 1300 ಪತ್ರಗಳು

ಮಹಾತ್ಮಾಜಿ ಮತ್ತು ಅವರ ಅನುಯಾಯಿಗಳು ಆಗಾಖಾಕ್ ಅರಮನೆಯಲ್ಲಿ ಸ್ಥಾನಬದ್ಧತೆಯಲ್ಲಿದ್ದಾಗ ಅವರಿಗಾಗಿ ಬಂದ 1300 ಪತ್ರಗಳನ್ನು ಮತ್ತು ಅನೇಕ ಪಾರ್ಸಲುಗಳನ್ನೂ ಸರಕಾರವು ತಡೆದಿತ್ತು. ಅವುಗಳೆಲ್ಲವನ್ನೂ ಇತ್ತೀಚೆಗೆ ಮಹಾತ್ಮರ ವಶಪಡಿಸಲಾಗಿದೆ. ದಿವಂಗತ ಕಸ್ತೂರಿ ಬಾರವರಿಗೆ ಬಂದ ಅನೇಕ ಪತ್ರಗಳೂ ಆ ಪತ್ರರಾಶಿಯಲ್ಲಿದ್ದುವಂತೆ. ಕೇಂದ್ರ ಸರಕಾರದವರು ಗಾಂಧೀಜಿಯವರ ಪಂಚಗನಿಗೆ ಬಂದು ಮುಟ್ಟಿದಾಗ, ತಡೆಯಲ್ಪಟ್ಟ ಆ ಎಲ್ಲಾ ಕಾಗದಗಳನ್ನೂ ಅವರಿಗೆ ತಲುಪಿಸಿದರು. ಅವುಗಳನ್ನು ಈವರೆಗೆ ಒಡೆದು ನೋಡಿದ್ದುದಿಲ್ಲ. ಗಾಂಧೀಜಿಯವರು ಸೇವಾಗ್ರಾಮ ಮುಟ್ಟಿದಸಂತರವೇ ಅವುಗಳನ್ನು ಪರೀಕ್ಷಿಸುವರೆಂದು ತಿಳಿಯಬಂದಿದೆ. (ನ. ಭಾ.)

ಂ ಂ

ಮಾತಿನ ಬೆಲೆ

[illegible]ದಲ್ಲಿ 179 ಭಾಷೆಗಳಿವೆ, 541 ಡಯಲೆಕ್ಟ್‌ಗಳಿವೆ. ಆದರೆ ಗಾಂಧೀಜಿಯ ಭಾಷೆ ಮಾತ್ರ ಮಾತ್ರೆ ಪೂರ್ಣತೆ ಹೊಂದಿದೆ. ಅಧರೂ ಚಿನ್ನಾರವರೂ ಮಾತನಾಡುತ್ತಾರೆ, ನೆಹರೂವರೂ ಮಾತನಾಡುತ್ತಾರೆ, ವೈಸರಾಯರೂ ಮಾತನಾಡುತ್ತಾರೆ. ಗಾಂಧೀಜಿಯವರ ಮಾತಿಗೆ ಪೂರ್ಣ ಬೆಲೆ ಇದೆ. (ಕಿ. ಶ್ಚಿಯನ್ ಸ್ಟೆನ್ ಮಾನಿಟರ್, ಶಾಸಿಂಗ್ಟನ್)

Edited, Printed and published by M. S. Krishna Rao, at the Satyavadi Press, Chamaraja Agrahar, Mysore.

ಭಾರಿ ನೌಕಾ ನಿಲ್ದಾಣ

ಕೇಪ್‌ಟೌನಿನಲ್ಲಿ ಒಂದು ನೌಕಾ ನಿಲ್ದಾಣವು ನಿರ್ಮಿತವಾಗುತ್ತಿದೆ. ಇದರಷ್ಟು ದೊಡ್ಡದಾದುದು ದಕ್ಷಿಣಾರ್ಧ ಗೋಳದಲ್ಲಿ ಮತ್ತೊಂದಿರುವುದಿಲ್ಲ. ಇದು ಸಿಡ್ನಿ ನಿಲ್ದಾಣಕ್ಕಿಂತ 60 ಅಡಿ ಹೆಚ್ಚು ಉದ್ದವಾಗಿರುತ್ತೆ; ಅಂದರೆ 1200 ಅಡಿ ಉದ್ದವೆಂದಂತಾಯಿತು.

ಂ ಂ

ಎಂಥಾ ಸಾವು

ಸೇಲಂ ಬಳಿ ವಿಶ್ವಕರ್ಮ ಜಾತಿಗೆ ಸೇರಿದ ಒಬ್ಬ 86 ವರ್ಷದ ಮುದುಕನು 10 ನೇ ತಾರೀಖಿನ ದಿವಸ ಕಾಲವಾದನು, ಗಂಡನು ಸತ್ತ ಎರಡು ಗಂಟೆಯ ಒಳಗೆ ಹೆಂಡತಿಯು ಕಾಲವಾದಳು. ಸಾವಿರಾರು ಜನರು ಸೇರಿ ಶವಸಂಸ್ಕಾರ ನಡೆಸಿದರು

ಪ್ರಪಂಚಕ್ಕೆ ಮುಂತ್ರಿಮಂಡಲ

ಪ್ರಪಂಚಕ್ಕೆ ಒಂದು ಮಂತ್ರಿಮಂಡಲವಾದರೆ, ಅದರಲ್ಲಿ ಸ್ಟಾಲಿನ್, ಜನರಲ್ ಮಾಂಟಿಗೊಮೇರಿ, ಚ್ಯಾಂಡಂ ಚಾಂಗ್ ಕೈಷೇಕ್, ಫ್ರೆಂಕ್ಲಿನ್ ರೂಸ್‌ವೆಲ್ಟ್ ಇನ್‌ಸ್ಟೈನ್, ಗಾಂಧೀಜಿ, ಮತ್ತು ಯಾವ ದೇಶದವಳೇ ಆಗಲಿ ಮನೆ ಸಂಸಾರ ಸರಿಯಾಗಿ ನಡೆಸುವ ಯುವತಿಯನ್ನು, ಇವರುಗಳನ್ನು ನೇಮಿಸಬೇಕೆಂದು ಲಂಡನ್ ಹೇಲಿ ಮಿರರ್ ಪತ್ರಕರ್ತರು ಬರೆದಿರುವರು.

ಲ್ಲಿ 75 ವರ್ಷ ವಯಸ್ಸಾಗಿದ್ದ ಆತನ ಹೆಂಡತಿಯು ಕಾಲವಾದಳು. ಸಾವಿರಾರು ಜನರು ಸೇರಿ ಶವಸಂಸ್ಕಾರ ನಡೆಸಿದರು

ಮೈಸೂರು ಸಿಟಿ ಮುನಿಸಿಪಾಲಿಟಿ

ಇದರಿಂದ ಪುರನಿವಾಸಿಗಳಿಗೆ ತಿಳಿಯಪಡಿಸುವುದೇನೆಂದರೆ——

ಮೈಸೂರು ನಗರದಲ್ಲಿ ಜನಗಳ ಅನುಕೂಲತೆಗಾಗಿ ಮುನಿಸಿಪಲ್ ಫೇರ್ ಪ್ರೈಸ್ ಸೌದೆ ಡಿಪೋಗಳನ್ನು ತೆರೆದು ಎರಡು ತಿಂಗಳಾದರೂ ಕೂಡ, ಜನಗಳಿಗೆ ಡಿಪೋ ಯಿರುವ ಸ್ಥಳವೇ ತಿಳಿಯದೆ, ದುಬಾರಿ ಬೆಲೆ ಕೊಟ್ಟು ಸೌದೆ ಕೊಳ್ಳುತ್ತಿದ್ದಾರೆಂದು ನಮ್ಮ ಗಮನಕ್ಕೆ ಬಂದಿರುತ್ತೆ. ಹಾಲಿ ಗೊತ್ತುಮಾಡಿರುವ ಡಿಪೋಗಳ ತಪಶೀಲ್ ಪಟ್ಟಿಯನ್ನು ಈ ಕೂಡ ಜನಗಳ ತಿಳುವಳಿಕೆ ಬಗ್ಗೆ ಪ್ರಚುರ ಪಡಿಸಿರುತ್ತದೆ. ಈ ಡಿಪೋಗಳಲ್ಲಿ ಒಂದು ರೂಪಾಯಿಗೆ ನಾಲ್ಕು ಮಣ ಉಂಡೆ ಸೌದೆಯನ್ನೂ, ಒಂದು ರೂಪಾಯಿ ಎರಡಾಣೆಗೆ ನಾಲ್ಕು ಮಣ ಸೀಳಿದ ಸೌದೆಯನ್ನೂ ಆಹಾರದ ವೇಷ್ಟ ಕಾರ್ಡಿನಲ್ಲಿ ನಮೂದಿರುವ ಜನಗಳ ಸಂಖ್ಯೆ ಅನುಸರಿಸಿ ಕೊಡಲಾಗುತ್ತೆ. ಅನಶ್ಯವಿದ್ದಲ್ಲಿ ಹೆಚ್ಚು ಡಿಪೋಗಳನ್ನು ತೆರೆಯಲು ಏರ್ಪಾಡುಮಾಡಲಾಗುತ್ತೆ.

ಸರ್ವರೂ ನಿಗದಿ ದರದಂತೆ ಮೊಕರೂರು ಆಗಿರುವ ಡಿಪೋಗಳಲ್ಲಿ ಸೌದೆಯನ್ನು ಪಡೆಯಬಹುದು.

ಮೊಹಲ್ಲಾ ಹೆಸರು	ಸ್ಥಳ
೧. ದೇವರಾಜ ಮೊಹಲ್ಲಾ—	(1) ದೇವರಾಜ ಮಾರ್ಕೆಟ್ಟಿನ ಉತ್ತರ ದಿಕ್ಕಿಗೆ ಆಸ್ಪತ್ರೆಗೆ ಒಳ. (2) ಹಳೆ ಜೊಂಬು ಬಜಾರಿನಲ್ಲಿರುವ ನಾಗೇಶ್ವರ ಅಂಡ್ ಕಂಪೆನಿ.
೨. ಕೃಷ್ಣರಾಜ ಮೊಹಲ್ಲಾ—	(1) ದೇವಸ್ಥಾಂಬಾ ಅಗ್ರಹಾರದಲ್ಲಿ ಶ್ರೀ ಕಾಶಿ ವಿಶ್ವನಾಥಸ್ವಾಮಿ ದೇವಸ್ಥಾನದ ಕಾಂಪೌಂಡಿನಲ್ಲಿ. (2) ಚಾಮುಂಡಿ ಎಕ್ಸ್‌ಟೆನ್ಷನ್‌ನಲ್ಲಿ ಕಲಾಭವನಂ ಹತ್ತಿರ ಡೋರ್ ನಂಬರು 2874 ಕಟ್ಟಡದಲ್ಲಿ.
೩. ವಾಣಿವಿಲಾಸ ಮೊಹಲ್ಲಾ—	(1) ಆದಿಪಂಪ ರೋಡಿನಲ್ಲಿ ಮು || ರಾಘವರ-ಡಿಪೋದಲ್ಲಿ.
೪. ಚಾಮರಾಜ ಮೊಹಲ್ಲಾ—	(1) ಚಾಮರಾಜಪುರಂ ಕೋ-ಆಪರೇಟಿವ್ ಸ್ಟೋರ್ಸ್ ಹಿಂಭಾಗ ನಂ. 1158 ಕಟ್ಟಡದಲ್ಲಿ (2) ಚಾಮರಾಜ ರೋಡಿನಲ್ಲಿ ಸೊಪ್ಪೆಟ್ ಅಸಿಸ್ಟೆಂಟ್ ರಿಜಿಸ್ಟ್ರಾರವರಆಫೀಸ್ ಪಕ್ಕದ ಕಾಂಪೌಂಡಿನಲ್ಲಿ. (3) ಕೃಷ್ಣಮೂರ್ತಿಪುರಂ ಮಾರ್ಕೆಟ್ ಬಳಿ. (4) ಡೋರ್ ನಂ. 2771 ಕನ್ನೇಗೌಡನ ಕೊಪ್ಪಲು.
೫. ಮಂಡಿ ಮೊಹಲ್ಲಾ—	(1) ಸುಲ್ತಾನ್‌ಬಾಗ್ ದಿನ ಮುನಿಸಿಪಲ್ ಪಾರ್ಕು ಆವರಣದಲ್ಲಿ. (2) ಈದಿಗದಲ್ಲಿ ಡೋರ್ ನಂ. 3462/2.
೬. ಲಷ್ಕರ್ ಮೊಹಲ್ಲಾ—	(1) ಎಲೆಕ್ಟ್ರಿಕ್ ಟ್ರಾನ್ಸ್‌ಫಾರ್ಮರ್ ಕಟ್ಟಡದ ಎದುರಿಗೆ ರಾಂಪಾರ್ಟ್ ರೋಡು ಬಾಜೂಪಲ್ಲಿ.
೭. ನಜರಬಾದ್—	(1) ಲೋಕಲ್ ಫಂಡ್ ಹಿಪ್ಪತ್ರೆ ಕಟ್ಟಡದ ಪಕ್ಕದಲ್ಲಿ. (2) ಹಾರ್ಡಿಂಜ್ ರಸ್ತೆ ಡೋರ್ ನಂ. 936 ರ ಕಟ್ಟಡದಲ್ಲಿ.

(ಸಹಿ) ಆರ್. ರಾಮಚಂದ್ರರಾವ್ ಭಾಂಭೋರೆ
ಪ್ರೆಸಿಡೆಂಟ್

11—8—44

ಮೈಸೂರು ಸಿಟಿ ಮುನಿಸಿಪಾಲಿಟಿ.

ಪ್ರಕಟಣೆ

ಡಿಪ್ತೀರಿಯಾ ಅನ್ನುವ ಗಂಟಲು ರೋಗ

ರಾಜಧಾನಿಯ ಕೆಲವು ಪ್ರದೇಶಗಳಲ್ಲಿ ಡಿಪ್ತೀರಿಯಾ ಅನ್ನುವ ಗಂಟಲು ರೋಗವು ಈಗ ಎರಡು ತಿಂಗಳುಗಳಿಂದ ಕಾಣಿಸಿಕೊಂಡಿರುತ್ತದೆ. ಈ ರೋಗವು ಕೇವಲ ಸಣ್ಣ ಮಕ್ಕಳಿಗೆ ಬಹು ಜಾಗ್ರತೆಯಾಗಿ ತಗಲುತ್ತದೆ. ಪ್ರಾರಂಭದಲ್ಲಿ ಗಂಟಲಿನಲ್ಲಿ ನೋವು ಉಂಟಾಗಿ ಸುಮಾರಾಗಿ ಜ್ವರ ಬರುವುದು ಮತ್ತು ಗಂಟಲಿನಲ್ಲಿ ಬಿಳಿ ಪೊರೆ ಕಾಣಿಸಿಕೊಳ್ಳುವುದು. ತಕ್ಷಣ ಸರಿಯಾದ ಚಿಕಿತ್ಸೆ ಮಾಡಿಸದಿದ್ದಲ್ಲಿ ಪ್ರಾಣಾಪಾಯಕ್ಕೆ ಕಾರಣವಾಗುತ್ತದೆ. ಇದುವರೆಗೂ ಈ ರೋಗದಿಂದ ಎಲ್ಲಾ ಮೊಹಲ್ಲಾಗಳಲ್ಲೂ ಕಳೆದ ಮೇ ತಿಂಗಳಿನಲ್ಲಿ ಒಂದು ಕೇಸು, ಜೂನ್ ತಿಂಗಳಲ್ಲಿ ಹದಿನೇಳು ಕೇಸು, ಜುಲೈ ಮಾಹೆ ತಪಲ್ ವರೆಗೆ 17 ಕೇಸು, ಒಟ್ಟು 35 ಕೇಸುಗಳು ವರದಿಯಾಗಿರುತ್ತದೆ. ಈ ಪೈಕಿ ಮರಣ 2 ಮಾತ್ರ.

ರಾಜಧಾನಿಯ ಪೌರಸಭೆಯ ಆರೋಗ್ಯ ಶಾಖೆಯವರು ಈ ರೋಗವನ್ನು ತಡೆಗಟ್ಟಲು ಸಕಾಲದಲ್ಲಿ ತಕ್ಕ ಕಾರ್ಯಕ್ರಮವನ್ನು ಕೈಗೊಂಡಿರುತ್ತಾರೆ. ಅದಕ್ಕಾಗಿ 304 ಲಕ್ಷ ಯೂನಿಟ್ಟುಗಳಷ್ಟು ಡಿಪ್ತೀರಿಯಾ ಸೀರಂ ಔಷಧಿಯನ್ನು ತರಿಸಿಟ್ಟಿರುತ್ತಾರೆ. ಬಡವರಿಗೆ ಈ ಔಷಧಿಯನ್ನು ಉಚಿತವಾಗಿ ಕೊಡಲಾಗುತ್ತದೆ. ಅನುಕೂಲಸ್ಥರಿಗೆ ಖಾಯಿಲೆ ಮಕ್ಕಳಿಗೆ ಕೊಡುವ ಸೀರಂ ಕೇವಲ ಕಮ್ಮಿ ಬೆಲೆಗೆ ಅಂದರೆ 10,000 ಯೂನಿಟ್ಟಿನ ಔಷಧಿಗೆ ರೂ. 1–2–0 ಯಂತೆ ಕೊಡಲಾಗುತ್ತದೆ. ರೋಗಿಯು ಸನಿಹಪದಲ್ಲಿರುವ ಮಕ್ಕಳ ರಕ್ಷಣೆಗೆ ಇನಾಕ್ಯುಲೇಷ್ಟ ಮಾಡಿಸುವಷ್ಟು ಔಷಧಿಯನ್ನು ಉಚಿತವಾಗಿ ಕೊಡಲಾಗುತ್ತದೆ.

ಅಲ್ಲದೆ ಇತರ ಮನೆಯಲ್ಲಿರುವ ಆರೋಗ್ಯವಾದ ಮಕ್ಕಳಿಗೂ ಇನಾಕ್ಯುಲೇಷ್ಟ ಮಾಡಿಸಲು ಡಿಪ್ತೀರಿಯಾ ಟಾಕ್ಸಾಯಿಡ್ ಎಂಬ ಔಷಧಿಯನ್ನು ಉಚಿತವಾಗಿ ಕೊಡಲಾಗುತ್ತದೆ.

ಈಗಾಗಲೆ 71 ಲಕ್ಷ ಯೂನಿಟ್‌ಗಳಷ್ಟು ಔಷಧಿಯನ್ನು ಜನಗಳ ಉಪಯೋಗಕ್ಕಾಗಿ ಹಂಚಲಾಗಿದೆ. 440 ಮಕ್ಕಳಿಗೆ ಇದುವರೆಗೂ ಇನಾಕ್ಯುಲೇಷ್ಟ ಮಾಡಿಸಲಾಗಿದೆ. ರೋಗಿಗಳ ಮನೆಗಳನ್ನೆಲ್ಲಾ ದಿನಾಲೂ ಸ್ವಚ್ಛ ಮಾಡಿಸಲಾಗಿದೆ. ನಗರದ ಡಾಕ್ಟರುಗಳೆಲ್ಲರಿಗೂ ಈ ವಿಷಯದಲ್ಲಿ ಸಹಕರಿಸಬೇಕಾಗಿ ಕೋರಲಾಗಿದೆ.

ಪುರಜನರೆಲ್ಲಾ ಈ ರೋಗವು ಕಾಣಿಸಿಕೊಂಡ ಒಡನೆಯೇ ಸಮೀಪಾಚಾರವನ್ನು ಆರೋಗ್ಯಾಧಿಕಾರಿಗಳಿಗೆ ತಿಳಿಸಿ. ಮುಂದೆ ಚಿಕಿತ್ಸೆ ಮತ್ತು ಎಚ್ಚರಿಕೆ ಕ್ರಮಗಳನ್ನು ಆಚರಿಸಬೇಕಾಗಿ ಈ ಮೂಲಕ ಪ್ರಾರ್ಥಿಸಲಾಗಿದೆ. (ಸಹಿ)

ಆರ್. ರಾಮಚಂದ್ರರಾವ್ ಭಾಂಭೋರೆ
ಪ್ರೆಸಿಡೆಂಟ್

ಮೈಸೂರು
26–7–44

ಮೈಸೂರು ಸಿಟಿ

ಲಂಚದ ಹಾವಳಿ ತಪ್ಪಿಸಲು ಉಪಾಯಗಳು ?

ಗಣಿಗಳಲ್ಲಿ, ವಿಲ್ಲುಗಳಲ್ಲಿ ಕೆಲಸಮಾಡುವವರನ್ನು ಹೊರಕ್ಕೆ ಬಿಡುವಾಗ ಶೋಧನೆಮಾಡಿ ಬಿಡುವಂತೆ, ಆಫೀಸು, ಕೋರ್ಟುಕಛೇರಿ ಮೊದಲಾದ ಸ್ಥಳಗಳಲ್ಲಿ ಕೆಲಸ ಮಾಡುವವರು, ಅವರು ಅಧಿಕಾರಿಗಳಾಗಲೀ ನೌಕರರಾಗಲೀ ಆಫೀಸಿನ ಹೊಸಲನ್ನು ದಾಟುವುದಕ್ಕಿಂತಲೂ ಶೋಧನೆಮಾಡಿಸಿಬಿಟ್ಟು ಅವರಲ್ಲಿ ಹಣ ದೊರೆತಲ್ಲಿ ಆ ಹಣವನ್ನು ಸರಕಾರಕ್ಕೆ ಸೇರಿಸಿಕೊಳ್ಳುವಂತಾಗಬೇಕು. ಈ ಶೋಧನಾ ಕಾರ್ಯಕ್ಕೆ ನಿಯಮಿತರಾದವರು, ಅಲ್ಪ ಸಂಬಳದವರಾದರೂ ಇತರ ಸರಕಾರಿ ಉದ್ಯೋಗಿಗಳ ಹಾಗೂ ಆಫೀಸರರ ತಾಬೇದಾರರಂತೆ ಪರಿಗಣಿಸಕೂಡದು,

ಆಫೀಸಿಗೆ ಹೋಗುವಾಗ ಯಾವ ಗುಮಾಸ್ತರೂ ಆಫೀಸರೂ ಹಣವನ್ನು ಜೇಬಿನಲ್ಲಿಟ್ಟುಕೊಂಡು ಹೋಗಕೂಡದೆಂಬ ನಿಯಮವಿರತಕ್ಕದ್ದು. ಮಧ್ಯಾಹ್ನ ಟಿಫಿನ್ನಿಗಾಗಿ, ರೈಲು, ಟ್ರಾಂ, ಬಸ್ಸುಗಳ ಖರ್ಚಿಗಾಗಿ ಹಣ ಇಟ್ಟುಕೊಳ್ಳಬೇಕಾಗಿದ್ದಲ್ಲಿ ಶೋಧಕ ಸಂಸ್ಥೆಯವರಲ್ಲಿ ಆಫೀಸನ್ನು ಪ್ರವೇಶಿಸುವುದಕ್ಕೆ ಮುಂಚೆ ಆ ಹಣವನ್ನು ಪಾವತಿಮಾಡಿ ರಶೀತಿ ಪಡೆದು ಮನೆಗೆ ಹೋಗುವಾಗ ತೆಗೆದುಕೊಂಡು ಹೋಗುವಂತಾಗಬೇಕು.

ಗುಡ್ಸ್‌ಷೆಡ್ಡು, ಬುಕ್ಕಿಂಗ್ ಆಫೀಸು, ಪಾರ್ಸಲ್ ಆಫೀಸು, ಸಬ್ ರೆಜಿಸ್ಟ್ರಾರ್ ಆಫೀಸು, ಮೊದಲಾದುವುಗಳಲ್ಲಿ ಕೆಲಸ ಮಾಡುವವರ ಶೋಧನೆಯು ಅವರು ಕೆಲಸಮಾಡುತ್ತಿರುವಾಗ ಕೂಡ ಆಗಿಂದಾಗ್ಗೆ ಆಗುತ್ತಿರತಕ್ಕದ್ದು.

ಪ್ರತಿಯೊಬ್ಬ ಸಂಸಾರಿಯು ಆದಾಯ, ವ್ಯಯಗಳನ್ನೂ, ಅವನು ಆಸ್ತಿವಂತನಾಗಿದ್ದಲ್ಲಿ, ಅಷ್ಟು ಆಸ್ತಿಯು ಕೂಡಲು ಕಾರಣಗಳೇನಿರಬಹುದೆಂದು ವಿಚಾರಿಸಿ ಲಂಚಖುಷುವತ್ತುಗಳೂ ಕಾರಣಗಳಾಗಿ ಕಂಡುಬಂದಲ್ಲಿ ಆ ಆಸ್ತಿಯನ್ನೆಲ್ಲಾ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತಾಗಬೇಕು.

ಆಫೀಸರುಗಳು ಯಾವ ಸೆಕ್ರೆಟರಿಯ ವ್ಯವಹಾರವನ್ನೂ ತಾವು ಮನೆಯಲ್ಲಿರುವಾಗ ಮಾಡಕೂಡದೆಂಬ ನಿಬಂಧನೆ ಇರತಕ್ಕದ್ದು.

ಸರ್ಕ್ಯೂಟ್ಟು ಹೋಗುವ ಆಫೀಸರುಗಳು ತಾವು ಪ್ರಯಾಣವನ್ನು ಅಂದಾಜು ಮಾಡಿ ಎಷ್ಟು ಹಣವನ್ನು ತಮ್ಮೊಂದಿಗೆ ಇಟ್ಟುಕೊಂಡಿದುವುದು, ಪ್ರಯಾಣಾಂತ್ಯದಲ್ಲಿ ಎಷ್ಟು ಮುಕ್ಕಿರಿಂಪುದೂ ಶೋಧನೆಯಾಗುತ್ತಿರತಕ್ಕದ್ದು. ಇದರಿಂದ ಸರ್ಕಾರದವರು ಕೊಡುವ ಪ್ರಯಾಣ ಖರ್ಚು ಎಷ್ಟುವರೆಗೆ ಉಪಯೋಗಿಸಲ್ಪಡುವುದೆಂದು ತಿಳಿಯುವುದು.

ನಿರ್ದಾಕ್ಷಿಣ್ಯವಾಗಿ ಕೆಲಸಮಾಡುವವರಿಲ್ಲದೆ ಲಂಚಖುಷುವತ್ತುಗಳನ್ನು ಬೇರಿನೊಂದಿಗೆ ಕಿತ್ತೊಗೆಯುವುದು ಅಸಂಭವವು.

ಆಫೀಸರುಗಳು ಲಂಚವನ್ನು ತೆಗೆದುಕೊಂಡರೆಂಬ ಆಪಾದನೆ ಇಲ್ಲದಿರುವುದಕ್ಕಾಗಿ, ಆಫೀಸರುಗಳ ಹೆಂಗಸರಿಗೆ ಮಕ್ಕಳಿಗೆ ಉಡಿಗೆ ಆಭರಣ ಮೊದಲಾದ ರೂಪಗಳಲ್ಲಿ ಯಾರು ಬಳಗದವರಲ್ಲದವರು ಕೊಡುವುದು ತಪ್ಪತಕ್ಕದ್ದು. (ಓಂ)

ಬರ್ಲಿನ್‌ನಲ್ಲಿ ಜರ್ಮನರ ಶಾಣಾಗತಿ

17—8—45 ರಿಂದ

At Ranjit

DUKH-SUKH

ರಣಜಿತ್ ಟಾಕೀಸಿನಲ್ಲಿ

ಸಿತಾರ — ರಾಮಮೂರ್ತಿ — ವಾಸಂತಿ

ಪಾತ್ರವಹಿಸಿರುವರು

ದುಖ್—ಸುಖ್

(ಹಿಂದಿ)

ಪ್ರತಿ ದಿನ 3 ಆಟಗಳು

For Good Printing—

L. N. Press

Sriramp st MYSORE

TALK-A-TONE

(Pioneer Film-mag of S. India)

Local Agent—D. Mahadev

Opera Talkies, Mysore

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೋ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

AT Opera— Last day !

ಅಪೇರಾ ಟಾಕೀಸ್‌ನಲ್ಲಿ .... ಕಡೇ ದಿನ!

ಮುಜರಿಂ (ಹಿಂದಿ)

ಮೋತೀಲಾಲ್, ಲೀಲಾದೇಸಾಯ್, ಯಾಕೂಬ್, ಜಗದೀಶ್

ಪಾತ್ರವಹಿಸಿರುವರು

At OPERA— From 22-8-45

BROTHERHOOD

ಭಾಯ್‌ಚಾರ

— An Amar Release

Edited, Printed and published by M. S. Krishna Rao, at the Satyavadi Press, Chamaraja Agrahar, Mysore.